ಜಾತಿ ಶಾಪ ವಿಮೋಚನೆಗೆ ದಿಕ್ಸೂಚಿಯಂತೆ ಒಮ್ಮೆ 'ಮೌಲ್ಯಯುತವಾದ ಸಲಹೆ'ಯನ್ನು ಕೊಟ್ಟ. ಜಾತಿಗಳ ನಿರಸನ ಮಾಡುವ ಅಧಿಕಾರವನ್ನು ಆಯಾ ಜಾತಿಯ ಮಠಗಳಿಗೆ ವಹಿಸಿಬಿಡುವುದು. ಎಲ್ಲ ಜಾತಿಗಳ ಮಠದ ಸ್ವಾಮಿಗಳು ಮತ್ತು ಮುಖ್ಯಸ್ಥರು ಒಂದೆಡೆ ಕುಳಿತುಕೊಂಡು ಅಲ್ಲಿ ಜಾತಿ ವಿನಾಶದ ಬಗ್ಗೆ ಒಮ್ಮತದ ತೀರ್ಮಾನ ತೆಗೆದುಕೊಳ್ಳುವುದು. ಮಠದ ಸ್ವಾಮೀಜಿಗಳ, ಮುಖ್ಯಸ್ಥರ ಆ ತೀರ್ಮಾನವನ್ನು ಯಾರೂ ವಿರೋಧಿಸಲಾರರು. ಒಂದು ಸಮಯ ಯಾರಾದರೂ ವಿರೋಧಿಸಿದರೆ ಅವರಿಗೆ ಸಮಾಜದಿಂದ ಬಹಿಷ್ಕಾರ ಹಾಕಬೇಕು. ಈ ಮಾತನ್ನು ಕೇಳಿ ನಾನು ದಿಗ್ಭ್ರಾಂತನಾಗಿ ಹೋದೆ. ನಾನೇನು ಬಂತು ನೀವು ಕೂಡ ಅದೇ ಆಗುತ್ತೀರಿ. ಒಂದು ಸಾಮಾಜಿಕ ಸಮಸ್ಯೆಗೆ ಪರಿಹಾರವನ್ನು ಹೇಗೆಲ್ಲ ನಮ್ಮ 'ಮತಿವಂತರು' ಕೊಡುತ್ತಾರೆ, ನೋಡಿದಿರ? ಜಯತೀರ್ಥನ ಅಮೂಲ್ಯ ಸಲಹೆಯನ್ನು ಕೇಳುತ್ತಿದ್ದ ಹಾಗೆ ನನಗೆ ತಕ್ಷಣಕ್ಕೆ ನೆನಪಿಗೆ ಬಂದದ್ದು 'ಕುರಿ ಕಾಯೊ ತೋಳ ಅಂದ್ರೆ ಸಂಬ್ಳ ಬೇಡ ಬುದ್ಧಿ' ಅನ್ನೊ ಗಾದೆ. ಇಂಥ ವಿಭಿನ್ನ ಶೈಲಿಯ ಜನರು ಅಧಿಕವಾಗಿರುವ ನಮ್ಮ ಸಮಾಜದಲ್ಲಿ ಯಾವ ಬಗೆಯ ಬದಲಾವಣೆ ಸಾಧ್ಯ? ಅಂತ ನಾನು ಅನೇಕ ಬಾರಿ ಚಿಂತಿಸಿದ್ದೇನೆ. ಆ ಚಿಂತನೆಯ ಬಿಸಿಗೇ ಇರಬೇಕು–ಒಮ್ಮೆ ದಂಡಕಾರಣ್ಯದಂತಿದ್ದ ನನ್ನ ತಲೆಗೂದಲು ಈಗ ಕುರುಚಲು ಕಾಡಾಗಿ ಪರಿವರ್ತನೆಯಾಗಿರುವುದಕ್ಕೆ. ಅಷ್ಟೇ ಅಲ್ಲ, ನನ್ನ ಗುರುಗಳು ಮತ್ತು ಮೈಸೂರಿನ ಸರಸ್ವತಿಪುರದಲ್ಲಿ ಒಂದೇ ಬೀದಿಯ ಸಹವಾಸಿ, ಸಾಹಿತಿ ಯು.ಆರ್. ಅನಂತಮೂರ್ತಿ ಅವರು, "ಲೊ ಹೊರೆಯಾಲ, ಈ ದೇಶದಲ್ಲಿ ಯಾವ ಕ್ರಾಂತಿನೂ ಆಗೊಲ್ಲ ಕಣೊ, ಈ ಮಣ್ಣಿಗೆ ಆ ಗುಣವೇ ಇಲ್ಲ" ಅಂತ ಹೇಳಿದ ಮಾತು ಈಗ ಮಾತ್ರವಲ್ಲ, ಆಗಿಂದಾಗ್ಗೆ ನನ್ನಲ್ಲಿ ರೊಂಯ್‌ದುಂಬಿಯಂಗೆ ರೊಂಯ್‌ಗುಡುತ್ತಲೇ ಇದೆ. ಆದರೂ ನಾನಂತು ಎಂದೂ ನಿರಾಶಾವಾದಿ ಅಲ್ಲ. ಯಾರು ಎಷ್ಟೇ ಬಡಿದುಕೊಂಡರೂ ವೈಚಾರಿಕ ಚಿಂತನೆಯ ಕವಿ ಕುವೆಂಪು ಹೇಳುವ ಹಾಗೆ 'ನಾನು ನಿರಾಶಾವಾದಿ ಅಲ್ಲ, ನೀವೂ ಆಗಬೇಡಿ' ಎಂಬ ನಾಣ್ಣುಡಿ ನನಗೆ ದಾರಿದೀಪವಾಗಿರುವಂತೆಯೇ ನಿಮಗೂ ಖಂಡಿತ ಆಗೇ ಆಗುತ್ತದೆ ಎಂಬುದು ನನ್ನ ಅಚಲ ನಿಲುವು. ಮನುಷ್ಯ ನಿರ್ಮಿತವಾದ ಈ ಜಾತಿ ವ್ಯವಸ್ಥೆ ಅದೇ ಮನುಷ್ಯನ ವೈಚಾರಿಕತೆ ಮತ್ತು ಜ್ಞಾನಸಂಪತ್ತು ವೃದ್ಧಿಸಿದಂತೆಲ್ಲ, ಕ್ಷುಲ್ಲಕ ಮತ್ತು ಜಡಸ್ಥಿತಿಯ ಜಾತಿ ವ್ಯವಸ್ಥೆ ಕ್ರಮೇಣ ಕರಗಿ, ಮುಂದೊಂದು ದಿನ ಕೇವಲ ನೆನಪಾಗುಳಿಯುವುದರಲ್ಲಿ ಯಾವ ಅನುಮಾನವೂ ಇಲ್ಲ. ಅದು ಬೇಗ ಆಗುಗೊಳ್ಳುವಂತೆ ವೇಗವರ್ಧಕವಾಗಿ ಕೆಲಸ ಮಾಡುವುದಷ್ಟೇ ಈಗ ನಮಗೆ ನಿಮಗೆ ಬಾಕಿ ಉಳಿದಿರುವ ಕೆಲಸ. ಆಗಲಾಗ, ನಮ್ಮ ದಿವಂಗತ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಅವರ ತಾಯಿ ಆಗಿಂದಾಗ್ಗೆ ಹೇಳುತ್ತಿದ್ದ 'ಜಾತಿ ಜಾತಿ ಅಂತ ಹುಡುಕ್ತಾ ಹೋದ್ರೆ ಈ ಊರ ತಳವಾರ ನಿನ್ನ ಚಿಕ್ಕಪ್ಪನಾಗ್ತಾನೆ' ಎಂಬ ಮಾತು ಸಾರ್ವಕಾಲಿಕ ಸತ್ಯವಾಗುಳಿಯುತ್ತದೆ. ಆಗಷ್ಟೆ ವಿಶ್ವ ಮಾನವನ ಉದಯಕ್ಕೆ ನಾಂದಿ ಹಾಡಿದಂತಾಗಿ, ಅಗೋ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದು ಸಾಕಾರಗೊಳ್ಳುತ್ತದೆ.

### ಹೊರೆಯಾಲ ದೊರೆಸ್ವಾಮಿ

ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹೊರೆಯಾಲ ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿದ್ದರು. ಒಂಬತ್ತು ಕವನ ಸಂಕಲನಗಳು, ಮೂರು ಕಥಾಸಂಕಲನಗಳು, ಮೂರು ಕಾದಂಬರಿಗಳು, 15 ನಾಟಕಗಳು, ಐದು ಜನಪದ ಸಾಹಿತ್ಯ ಸಂಗ್ರಹಗಳು ಸೇರಿದಂತೆ ಈವರೆಗೆ 56 ಕೃತಿಗಳನ್ನು ಪ್ರಕಟಿಸಿದ್ದಾರೆ. 'ಬಯಲು' ಕಾದಂಬರಿ ಚಲನಚಿತ್ರವಾಗಿದೆ. ಪ್ರಸ್ತುತ ಮೈಸೂರಿನಲ್ಲಿ ವಾಸ.